ಒ ಎಸ್ ನಂ.**1656/2018**
ಪಿ.ಡಬ್ಲ್ಯೂ**:1**

**ದಿನಾಂಕಃ 04.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ. ಅಮೃತಾ ಟಿ., ಪ್ರತಿವಾದಿ ಪರ ವಕೀಲರಿಂದಃ-**

ವಾದಿ ಕಂಪನಿ 2005 ರಲ್ಲಿ ಸ್ಥಾಪನೆಯಾಗಿದೆ. ವಾದಿ ಕಂಪನಿಯ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ. ದಾವೆ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಿಪಿ.3 ರಿಪ್ಲೈ ನೋಟಿಸ್ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆನು. ನಿಪಿ.1 ಅಧಿಕಾರ ಪತ್ರದ ಆದಾರದ ಮೇಲೆ ಈ ದಾವೆ ಹೂಡಿದ್ದೇನೆ ಎನ್ನುವುದು ನಿಜ. ವಾದಿ ಕಂಪನಿಗೆ ಮೂರು ಜನ ನಿರ್ದೇಶಕರು ಇದ್ದಾರೆ. ವಾದಿ ಕಂಪನಿಗೆ ದಾವೆ ದಾಖಲಿಸುವ ಕಾಲಕ್ಕೂ ಮೂರು ಜನ ನಿರ್ದೇಶಕರು ಇದ್ದರು. ವಾದಿ ಕಂಪನಿಗೆ ನಾನು ವ್ಯವಸ್ಥಾಪಕ ನಿರ್ದೇಶಕನಾಗಿದ್ದೇನೆ. ವಾದಿ ಕಂಪನಿಗೆ ದಾವೆ ದಾಖಲಿಸುವ ಕಾಲಕ್ಕೆ ನಾನೇ ವ್ಯವಸ್ಥಾಪಕ ನಿರ್ದೇಶಕನಾಗಿದ್ದೆನು. ಬಿ.ಕೆ. ವಿವೇಕ್ ಮತ್ತು ಕೆ. ಎನ್. ಅಪರ್ಣ ಉಳಿದ ಇಬ್ಬರು ನಿರ್ದೇಶಕರಾಗಿದ್ದಾರೆ. ಈಗ ಬಿ.ಕೆ. ವಿವೇಕ್ ಜಾಗಕ್ಕೆ ಆತನ ಹೆಂಡತಿ ದೀಪಾ ನಿರ್ದೇಶಕಿಯಾಗಿದ್ದಾಳೆ. ವಾದಿ ಕಂಪನಿ ಅಪಾರ್ಟ್ ಮೆಂಟ್ ಕಟ್ಟಿರುವ ಜಾಗ ಪ್ರಾಪರ್ಟಿ ನಂ.1113 ಆಗಿದ್ದು ಅದರ ಒಟ್ಟು ವಿಸ್ತೀರ್ಣ 2400 ಚದರ ಅಡಿ ಇರುತ್ತದೆ. ಅಪಾರ್ಟ್ ಮೆಂಟ್ ಕಟ್ಟುವ ಮುಂಚೆ 2015 ರಲ್ಲಿ ಅದರ ಪ್ಲಾನ್ ಮಂಜೂರು ಮಾಡಿಕೊಂಡಿದ್ದೆವು. ಮಂಜೂರಾದ ಪ್ಲಾನ್ ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ನಮಗೆ ಪ್ಲಾನ್ ಪ್ರಕಾರ ತಳಮಹಡಿ, ನೆಲಮಹಡಿ ಮತ್ತು ಅದರ ಮೇಲೆ ಎರಡು ಫ್ಲೋರ್ ಕಟ್ಟಲು ಅನುಮತಿ ನೀಡಿದ್ದರು. ಒಂದೊಂದು ಫ್ಲೋರ್ ನಲ್ಲಿ ಒಂದೊಂದು **ಪ್ಲ್ಯಾಟ್** ಕಟ್ಟಲು ಅನುಮತಿ ನೀಡಿದ್ದರು.

ನಾವು ನೆಲಮಹಡಿಯಲ್ಲಿ ಎರಡು, ಮೊದಲನೇ ಮಹಡಿಯಲ್ಲಿ ಒಂದು, ಮತ್ತು ಎರಡನೇ ಮಹಡಿಯಲ್ಲಿ ಒಂದು **ಪ್ಲ್ಯಾಟ್ ನ್ನು** ಕಟ್ಟಿದ್ದೆವು. ನೆಲಮಹಡಿಯಲ್ಲಿನ ಪ್ರತಿಯೊಂದು **ಪ್ಲ್ಯಾಟ್** ನ ವಿಸ್ತೀರ್ಣ ಅಂದಾಜು 700 ಚದರ ಅಡಿ ಇರುತ್ತದೆ. ಮೊದಲನೇ ಮತ್ತು ಎರಡನೇ ಮಹಡಿಯ **ಪ್ಲ್ಯಾಟ್** ಗಳ ವಿಸ್ತೀರ್ಣ ಅಂದಾಜು ತಲಾ 2000 ಚದರ ಅಡಿ ಇರುತ್ತದೆ. ಸದರಿ **ಪ್ಲ್ಯಾಟ್** ಗಳ ನಿಖರವಾದ ವಿಸ್ತೀರ್ಣ ಹೇಳಲು ಬರುವುದಿಲ್ಲ. ತಳಮಹಡಿಯಲ್ಲಿ 7 ಕಾರ್ ಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಲಿಫ್ಟ್ ವ್ಯವಸ್ಥೆ ಮಾಡಲಾಗಿದೆ. ದಾವೆ ದಾಖ್ಲಿಸುವ ಕಾಲಕ್ಕೆ ವಾದಿ ಕಂಪನಿಗೆ ಮೂರು ಬ್ಯಾಂಕ್ ಗಳಲ್ಲಿ ಖಾತೆಗಳು ಇದ್ದವು. ಅವುಗಳು 1. ಕಾರ್ಪೋರೇಷನ್ ಬ್ಯಾಂಕ್, 2. ಕೋಟಕ್ ಮಹೀಂದ್ರ

ಬ್ಯಾಂಕ್ ಮತ್ತು 3. ಬ್ಯಾಂಕ್ ಆಫ್ ಬರೋಡಾ. ಅಕೌಂಟ್ ನಂಬರ್ ಗಳು ನೆನಪಿಲ್ಲ. ಈಗ ಕೇವಲ ಬ್ಯಾಂಕ್ ಆಫ್ ಬರೋಡಾ ಅಕೌಂಟ್ ಮಾತ್ರ ಆಪರೇಟ್ ಮಾಡುತ್ತಿದೆ. ಉಳಿದ ಎರಡು ಅಕೌಂಟ್ ಗಳನ್ನು ಕ್ಲೋಸ್ ಮಾಡಲಾಗಿದೆ. ಯಾವಾಗ ಕ್ಲೋಸ್ ಮಾಡಲಾಗಿದೆ ಎನ್ನುವುದು ನನಗೆ ನೆನಪಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

ಒ ಎಸ್ ನಂ.**1656/2018**
ಪಿ.ಡಬ್ಲ್ಯೂಃ**1**

**ದಿನಾಂಕಃ 18.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ. ಅಮೃತಾ ಟಿ., ಪ್ರತಿವಾದಿ ಪರ ವಕೀಲರಿಂದಃ-**

ಆಸ್ತಿ ಸಂ.1113 ಇದರಲ್ಲಿ 4 ನೇ ಮಹಡಿಯಲ್ಲಿ ಒಂದು ಪೆಂಟ್‌ಹೌಸ್ ಇದೆ. ಆ ಪೆಂಟ್‌ಹೌಸ್ ವಿಸ್ತೀರ್ಣ ನನಗೆ ನೆನಪಿಲ್ಲ. 2016 ರಲ್ಲಿ ಆ ಪೆಂಟ್‌ಹೌಸ್ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿದೆವು, 2017 ರಲ್ಲಿ ಕಾಮಗಾರಿ ಪೂರ್ಣಗೊಂಡಿತು. ಆದರೆ ಕಾಮಗಾರಿ ಪೂರ್ಣಗೊಂಡ ತಿಂಗಳು ನನಗೆ ನೆನಪಿಲ್ಲ. 2005 ರಿಂದ 2025 ವರೆಗೆ 7-8 ಪ್ರಾಜೆಕ್ಟಗಳನ್ನು ನಮ್ಮ ಕಂಪನಿ ಪೂರ್ಣಗೊಳಿಸಿದೆ. ನಮ್ಮ ಕಂಪನಿಯ ಬ್ಯಾಂಕ್ ಅಕೌಂಟ್ ಗಳನ್ನು ನಾನೇ ಆಫರೇಟ್ ಮಾಡುತ್ತೇನೆ. ಕಂಪನಿಯ ಬ್ಯಾಂಕ್ ಅಕೌಂಟ್ ಗಳನ್ನು ಆಫರೇಟ್ ಮಾಡಲು ಅಧಿಕಾರ ನೀಡಿರುವ ಬಗ್ಗೆ ಬೋರ್ಡ್ ರೆಸುಲ್ಯೂಷನ್ ಇರುತ್ತದೆ. ಆ ಬೋರ್ಡ್ ರೆಸುಲ್ಯೂಷನ್ ಪಾಸ್ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಆ ಬೋರ್ಡ್ ರೆಸುಲ್ಯೂಷನ್ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಮ್ಮ ಕಂಪನಿಯ 1. ಕಾರ್ಪೋರೇಷನ್ ಬ್ಯಾಂಕ್, 2. ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು 3. ಬ್ಯಾಂಕ್ ಆಫ್ ಬರೋಡಾ ಇವುಗಳ ಅಕೌಂಟ್ ಸ್ಟೇಟ್ ಮೆಂಟ್ ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ.

ನಮ್ಮ ಕಂಪನಿಯ ಆದಾಯ ಮತ್ತು ವ್ಯಯದ ರಿಜಿಸ್ಟರ್ ಇಟ್ಟಿರುವುದಿಲ್ಲ, ಆದರೆ ಅದನ್ನು ಕಂಪ್ಯೂಟರ್ ನಲ್ಲಿ ಟ್ಯಾಲಿ ಫಾರ್ಮನಲ್ಲಿ ಇಟ್ಟಿರುತ್ತೇವೆ. ಈ ಟ್ಯಾಲಿ ಫಾರ್ಮನ್ನು 2005 ರಿಂದ ಇಟ್ಟಿರುತ್ತೇವೆ. ಸದರಿ ಟ್ಯಾಲಿ ಫಾರ್ಮನ ಪ್ರಿಂಟ್‌ಔಟ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಕಂಪನಿಯ ಪರವಾಗಿ ಚೆಕ್ ನೀಡಲು ಬೋರ್ಡ್ ರೆಸುಲ್ಯೂಷನ್ ಬೇಕಾಗಿರುವುದಿಲ್ಲ, ಆ ಅಧಿಕಾರ ನನಗೆ ಮೊದಲಿನಿಂದಲು ಇರುತ್ತದೆ. ಈ ವಿಷಯದ ಬಗ್ಗೆ ಬೋರ್ಡ್ ರೆಸುಲ್ಯೂಷನ್ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ಕಟ್ಟಡ ಕಟ್ಟುವಾಗ ಸ್ಟೇಜ್‌ವೈಸ್ ಖರ್ಚಿನ ಬಗ್ಗೆ ನಾನು ಪ್ರತಿವಾದಿಗೆ ಮಾಹಿತಿ ಕೊಟ್ಟಿರುವುದಿಲ್ಲ. ಕಟ್ಟಡ ಕಟ್ಟುವಾಗ ಬಳಸಿದ ಸಾಮಾಗ್ರಿಗಳ ಬಗ್ಗೆ ನಾನು ಪ್ರತಿವಾದಿಗೆ ಮಾಹಿತಿಯನ್ನು ಪೋಟೋ ಮತ್ತು ಇ-ಮೇಲ್ ಗಳ ಮಾಲಕ ಕೊಟ್ಟಿದ್ದೇನೆ. ಆ ಪೋಟೋ ಮತ್ತು ಇ-ಮೇಲ್ ಗಳ ಪ್ರಿಂಟ್ ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೆ ತೊಂದರೆ ಇಲ್ಲ. ಸಾಕ್ಷಿ ಮುಂದುವರೆದು ಪೋಟೋಗಳು ಲಭ್ಯವಿದ್ದರೆ ಹಾಜರು ಪಡಿಸಬಹುದು ಎನ್ನುತ್ತಾರೆ. ಪೋಟೋಗಳನ್ನು ವಾಟ್ಸಪ್ ಮುಖಾಂತರ ಕಳುಹಿಸಿರುತ್ತೇನೆ.

ಒ ಎಸ್ ನಂ.**1656/2018**
ಪಿ.ಡಬ್ಲ್ಯೂ:**1**

ಯಾವ ರೀತಿಯ ಮತ್ತು ಗುಣಮಟ್ಟದ ಸಾಮಾಗ್ರಿಗಳನ್ನು ಕಟ್ಟಡಕ್ಕೆ ಬಳಸಬೇಕು ಎನ್ನುವ ಬಗ್ಗೆ ಜೆಡಿಎ ದಲ್ಲಿ ನಮೂದಿರುತ್ತದೆ. ನಮ್ಮ ಕಂಪನಿಯ ಪರವಾಗಿ ಪ್ರತಿವಾದಿಗೆ ನಾನೇ ವಾಟ್ಸಪ್, ಇ-ಮೇಲ್ ಮತ್ತು ಫೋನ್ ಮುಖಾಂತರ ಕಮ್ಯುನಿಕೇಟ್ ಮಾಡುತ್ತಿದ್ದೆನು. ನಾನು ಪ್ರತಿವಾದಿಗೆ 20-25 ಬಾರಿ ಖುದ್ದಾಗಿ ಬೇಟಿಯಾಗಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**